ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 520/22**

**ಫ್ರಾಸಾ- 8 ಚಾಸಾ- 11**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಕೆ ದೇವರಾಜು |
| ತಂದೆಯ ಹೆಸರುಃ | : | ಕರಿಯಪ್ಪ |
| ವಯಸ್ಸುಃ | : | 61 ವರ್ಷ |
| ಉದ್ಯೋಗಃ | : | ನಿವೃತ್ತ ಪಿ ಎಸ್ ಐ |
| ವಾಸ | : | ಬೇಲೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 26-03-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ದಿನಾಂಕ 1-1-21 ರಿಂದ 1-1-22 ರವರೆಗೆ ಹಾಸನ ಬಡಾವಣೆ ಪಿ ಎಸ್ ನಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 13-10-21 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ವಸ್ತುಗಳನ್ನು ಚಾಸಾ-1 ಪಿಎಸ್ಐ ರವರು ಇನ್ವೆಂಟರಿ ಮಾಡಿಸುವಂತೆ ಆದೇಶ ಮಾಡಿದ ಮೇರೆಗೆ ಸದರಿ ವಸ್ತುಗಳನ್ನು ಹಾಸನ 4ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಇನ್ವೆಂಟರಿ ಮಾಡಿದೆನು. ಆ ವಸ್ತುಗಳನ್ನು ತೂಕ ಮಾಡಿದಾಗ 3 ಕೆಜಿ 510 ಗ್ರಾಂ ಇತ್ತು. ಅದರಲ್ಲಿ 100ಗ್ರಾಂ ನ್ನು ಪ್ರತ್ಯೇಕವಾಗಿ ಮಾದರಿಯಾಗಿ ತೆಗೆದು ಪ್ಯಾಕು ಮಾಡಿ ಸೀಲು ಮಾಡಿರುತ್ತೇನೆ. ಉಳಿದ ಗಾಂಜಾವನ್ನು ಪ್ಯಾಕು ಮಾಡಿ ಸೀಲು ಮಾಡಿದೆನು. ಈ ಬಗ್ಗೆ ನ್ಯಾಯಾಧೀಶರು ದೃಢಪತ್ರ ನೀಡಿರುತ್ತಾರೆ ಮತ್ತು ಸ್ಥ,ಳದಲ್ಲಿ ಫೋಟೋ ತೆಗೆಸಿರುತ್ತೇನೆ. ನ್ಯಾಯಾಧೀಶರು ನೀಡಿರುವ ದೃಢಪತ್ರ ನೋಡುತ್ತಿದ್ದು ನಿಪಿ-14 ಎಂದು ಗುರುತಿಸಲಾಯಿತು. ಅದರಲ್ಲಿ ನ್ಯಾಯಾಧೀಶರ ಮುಂದೆ ನಡೆದ ಪ್ರಕ್ರಿಯೆಗೆ ಸಂಬಂಧಿಸಿದಂತೆ

ತೆಗೆಸಿದ 6 ಫೋಟೋ ನೋಡುತ್ತಿದ್ದು ನಿಪಿ-15 ರಿಂದ 20 ಎಂದು ಗುರುತಿಸಲಾಯಿತು. ಈ ಬಗ್ಗೆ ಅನುಬಂಧ1 ಮತ್ತು 2 ನ್ನು ಸ್ಥ,ಳದಲ್ಲಿ ತಯಾುರಿಸಿರುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು ನಿಪಿ-21 ಮತ್ತು 22 ಎಂದು ಗುರುತಿಸಲಾಯಿತು. ಸ್ಥ,ಳದಲ್ಲಿ ಮಾದರಿ ಸೀಲನ್ನು ತಯಾರಿಸಿರುತ್ತಾರೆ. ಅದನ್ನು ಈಗ ನೋಡುತ್ತಿದ್ದು ನಿಪಿ-23 ಎಂದು ಗುರುತಿಸಲಾಯಿತು.

(ಕಲಾಪದ ವೇಳೆ ಮುಗಿದಿದ್ದರಿಂದ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**